

# ಎಲ್ಲರಿಂದ ಕಲಿಯುತ್ತ ಮಾಡಿದ ಸಿನಿಮಾ ಮದಗಜ

ಎಸ್‌. ಮಹೇಶ್‌ಕುಮಾರ್

**ತಮ್ಮ ನಿರ್ದೇಶನದ ಎರಡನೇ ಸಿನಿಮಾ ಬಿಡುಗಡೆ ಮಾಡುವ ಪ್ರಸವವೇದನೆಯಲ್ಲಿದ್ದಾರೆ. ಡಿ. 3ರಂದು ಬಿಡುಗಡೆಯಾಗುತ್ತಿರುವ 'ಮದಗಜ'ನ ಕುರಿತು ಸಾಕಷ್ಟು ನಿರೀಕ್ಷೆ ಇದೆ. ಮೊದಲ ಸಿನಿಮಾದಲ್ಲಿ ದೊರೆತ ಗೆಲುವಿನ ಸಿಹಿ ಈ ಸಿನಿಮಾದ ಮೂಲಕವೂ ಮುಂದುವರಿಯುತ್ತದೆ ಎಂಬ ವಿಶ್ವಾಸ ಅವರದ್ದು.**

■ ಪದ್ಮನಾಭ ಭಟ್

'ಅಯೋಗ್ಯ' ಸಿನಿಮಾದ ಮೂಲಕ ತಾವು ಗೆಲ್ಲಲು ಯೋಗ್ಯತೆ ಇರುವ ನಿರ್ದೇಶಕ ಎಂದು ಸಾಬೀತುಮಾಡಿಕೊಂಡವರು ಎಸ್‌. ಮಹೇಶ್‌ಕುಮಾರ್‌. ಮೊದಲ ಸಿನಿಮಾದಲ್ಲಿ ಕಾಮಿಡಿ ಎಂಟರ್‌ಟೈನರ್ ಸೂತ್ರವನ್ನು ಹಿಡಿದು ಗೆಲುವಿನ ಗಾಳಿಪಟ ಹಾರಿಸಿದ್ದ ಮಹೇಶ್‌, ಈಗ ಭರ್ಜರಿ ಆ್ಯಕ್ಷನ್ ಸ್ಟೋರಿಯೊಂದಿಗೆ ದೂಳೆಬ್ಬಿಸಲು ಬರುತ್ತಿದ್ದಾರೆ. ಅವರ ನಿರ್ದೇಶನದ ಎರಡನೇ ಸಿನಿಮಾ 'ಮದಗಜ' ಡಿ. 3ರಂದು ಬಿಡುಗಡೆಯಾಗುತ್ತಿದೆ.

'ಮದಗಜ' ಸಿನಿಮಾದ ಕಥೆಯನ್ನು ಮಹೇಶ್ 'ಅಯೋಗ್ಯ' ಸಿನಿಮಾಗಿಂತ ಮೊದಲೇ ಸಿದ್ಧ ಮಾಡಿಟ್ಟುಕೊಂಡಿದ್ದರಂತೆ. ಆದರೆ ಆ ಸಿನಿಮಾದ ಮೂಲಕ ನಿರ್ದೇಶಕನಾಗಿ ಪರಿಚಿತಗೊಳ್ಳುವುದು ಅವರಿಗೆ ಇಷ್ಟವಿರಲಿಲ್ಲ.

'ಎಂಥ ಸಿನಿಮಾದ ಮೂಲಕ ನಿರ್ದೇಶನಕ್ಕೆ ಇಳಿಯಬೇಕು ಎಂಬ ಕುರಿತು ನನಗೆ ಸ್ಪಷ್ಟ ಕಲ್ಪನೆ ಇತ್ತು. ಹಾಗಾಗಿಯೇ ಕಾಮಿಡಿ ಜಾನರ್ ಆರಿಸಿಕೊಂಡೆ. ಜನರನ್ನು ನಗಿಸುವುದು ತುಂಬ ಕಷ್ಟ. ಆ ಜಾನರ್‌ನಲ್ಲಿ, ಸಣ್ಣ ಬಜೆಟ್‌ನಲ್ಲಿ ಸಿನಿಮಾ ಮಾಡಿ ಗೆದ್ದು ನನ್ನನ್ನು ನಾನು ಸಾಬೀತುಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ 'ಅಯೋಗ್ಯ' ಸಿನಿಮಾ ಮಾಡಿದೆ. ಸಿನಿಮಾ ಗೆದ್ದಿತು. ಹಾಗಾಗಿಯೇ ನನಗೆ ಇಪ್ಪತ್ತೈದು ಮೂವತ್ತು ಕೋಟಿ ಬಂಡವಾಳದ ಸಿನಿಮಾ ಮಾಡುವ ವಿಶ್ವಾಸ ಬಂತು' ಎಂದು ಹೇಳುತ್ತಾರೆ ಮಹೇಶ್‌.

ನಿರ್ಮಾಪಕ ಉಮಾಪತಿ ಅವರಿಗೆ ಕಥೆ ಹೇಳಿದಾಗ ಅವರು ಖುಷಿಯಾಗಿ ಬಂಡವಾಳ ಹೂಡಲು ಮುಂದೆ ಬಂದರು. ಶ್ರೀಮುರಳಿ 'ಮದಗಜ' ಕಥೆ ಕೇಳುವ ಹೊತ್ತಿನಲ್ಲಿನ್ನೂ 'ಅಯೋಗ್ಯ' ಐವತ್ತನೇ ದಿನದ ಪ್ರದರ್ಶನ ಕಾಣಿಸುತ್ತಿತ್ತು. ಆದರೆ ಮುರಳಿ ಇನ್ನೂ ಆ ಸಿನಿಮಾ ನೋಡಿರಲಿಲ್ಲ. ಆದರೆ ಮಹೇಶ್ ಹೇಳಿದ ಕಥೆ ಅವರಿಗೆ ತುಂಬ ಇಷ್ಟವಾಯ್ತು. ಹಾಗಾಗಿ ಒಪ್ಪಿಕೊಂಡರು.

'ಅಯೋಗ್ಯ' ಸಿನಿಮಾ ನಂತರ ಅಂಥದೇ ಸಿ ನಿ ಮಾ

